ಶ್ರೀ ಮಾನಪ್ಪ ವಜ್ಜಲ್: ಉತ್ತರವನ್ನು ಕೊಟ್ಟಿದ್ದಾರೆ, ಆದರೆ ಅಲ್ಲಿ ಸಮಸ್ಯೆ ಇರುವುದನ್ನು ಹೇಳುವುದಕ್ಕೆ ನಾನು ಇಷ್ಟಪಡುತ್ತಿದ್ದೇನೆ. ಲಿಂಗಸುಗೂರಿನಲ್ಲಿ 100 ಆಸ್ಪತ್ರೆಗಳ ದೊಡ್ಡ ಆಸ್ಪತ್ರೆಯಿರುವುದರಿಂದ, ಅಲ್ಲಿ ವೈದ್ಯರ ಮತ್ತು ಸಿಬ್ಬಂದಿ ಕೊರತೆಯಿರುವುದರಿಂದ ಅಲ್ಲಿನ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಹೀಗಾಗಿ ನಾನು ಸಚಿವರ ಗಮನಕ್ಕೆ ತರಲು ಬಯಸುತ್ತಿದ್ದೇನೆ, ಆದಷ್ಟು ಬೇಗನೆ ಅಲ್ಲಿ ಖಾಲಿ ಇರುವ ವೈದ್ಯರು ಮತ್ತು ಇತರ ಸಿಬ್ಬಂದಿಗಳನ್ನು ಭರ್ತಿ ಮಾಡಿ ಸಾರ್ವಜನಿಕರಿಗೆ ಮತ್ತು ರೋಗಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ನಾನು ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಬಿ. ಶ್ರೀರಾಮುಲು: ಮಾನ್ಯ ಅಧ್ಯಕ್ಷರೆ, ಲಿಂಗಸುಗೂರಿನಲ್ಲಿರುವ ಆಸ್ಪತ್ರೆಯು 100 ಹಾಸಿಗೆಗಳ ಆಸ್ಪತ್ರೆ ಆದ ನಂತರ ಅಲ್ಲಿಗೆ 8 ಮಂದಿ ತಜ್ಞ ವೈದ್ಯರ ಹುದ್ದೆಗಳು ಮಂಜೂರಾಗಿತ್ತು. ಸ್ತ್ರೀರೋಗ ತಜ್ಞರು ಬೇಕು ಎಂದು ಅವರು ಕೇಳುತ್ತಿದ್ದಾರೆ. ಸ್ತ್ರೀರೋಗ ತಜ್ಞರ 2 ಹುದ್ದೆಗಳು ಮಂಜೂರಾಗಿದ್ದು, ಅದರಲ್ಲಿ ಒಂದು ಹುದ್ದೆ ಭರ್ತಿಯಾಗಿದ್ದು, ಇನ್ನೊಂದು ಹುದ್ದೆ ಭರ್ತಿಯಾಗ ಬೇಕಾಗಿದೆ. 20 ನರ್ಸ್‌ಗಳ ಹುದ್ದೆಗಳು ಮಂಜೂರಾಗಿದ್ದು, ಅದರಲ್ಲಿ 12 ಹುದ್ದೆಗಳು ಖಾಲಿ ಇವೆ. ಈಗ ನಾವು ತೆಗೆದುಕೊಂಡಿರುವ 815 ಮಂದಿ ಡಾಕ್ಟರ್‌ಗಳು ಕೆಲಸಕ್ಕೆ ಹಾಜರಾದ ನಂತರ, ಈ ಲಿಂಗಸುಗೂರು ಆಸ್ಪತ್ರೆಗೆ ಬೇಕಾದಂಥ staff, ನರ್ಸ್‌ಗಳು ಮತ್ತು ಡಾಕ್ಟರ್‌ಗಳನ್ನು ಭರ್ತಿ ಮಾಡಿಕೊಡುತ್ತೇನೆಂದು ಅವರಿಗೆ ನಾನು ತಿಳಿಸಬಯಸುತ್ತೇನೆ.

ಕರ್ನಾಟಕ ರಾಜ್ಯದಲ್ಲಿನ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರ ಮತ್ತು ವೈದ್ಯರೇತರ ಸಿಬ್ಬಂದಿಗಳ ಕೊರತೆ ಬಗ್ಗೆ

126 ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿನ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರ ಮತ್ತು ವೈದ್ಯರೇತರ ಸಿಬ್ಬಂದಿಗಳ ಕೊರತೆಯ ಸಂಖ್ಯೆ ಎಷ್ಟು;

ಆ) ಹಾಗಿದ್ದಲ್ಲಿ, ವೈದ್ಯರ ಮತ್ತು ಸಿಬ್ಬಂದಿಗಳ ಕೊರತೆ ಇದ್ದರೆ ಅವರನ್ನು ಭರ್ತಿ ಮಾಡಲು ಕೈಗೊಂಡ ತುರ್ತು ಕ್ರಮಗಳೇನು;

ಇ) ತೀರ್ಥಹಳ್ಳಿ ವಿಧಾನ ಸಭಾ ಕ್ಷೇತ್ರದಲ್ಲಿನ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರ ಮತ್ತು ವೈದ್ಯರೇತರ ಸಿಬ್ಬಂದಿಗಳ ಕೊರತೆ ಎಷ್ಟಿದೆ; ವಿವರ ನೀಡುವುದು;

ಈ) ತೀರ್ಥಹಳ್ಳಿ ವಿಧಾನ ಸಭಾ ಕ್ಷೇತ್ರದ ಸರ್ಕಾರಿ ಆಸ್ಪತ್ರೆಗಳಲ್ಲಿನ ಕಟ್ಟಡಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು;

ಊ) ತೀರ್ಥಹಳ್ಳಿ ವಿಧಾನ ಸಭಾ ಕ್ಷೇತ್ರದಲ್ಲಿರುವ ಅನೇಕ ಸರ್ಕಾರಿ ಆಸ್ಪತ್ರೆಯ ಕಟ್ಟಡಗಳು ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಋ) ಹಾಗಿದ್ದಲ್ಲಿ, ಈ ಕಟ್ಟಡಗಳ ದುರಸ್ಥಿಗಾಗಿ ತೆಗೆದುಕೊಂಡ ಕ್ರಮಗಳೇನು?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಕರ್ನಾಟಕ ರಾಜ್ಯದಲ್ಲಿನ ಸರ್ಕಾರಿ ಆಸ್ಪತ್ರೆಗಳಲ್ಲಿ 1288 ವೈದ್ಯರ ಮತ್ತು 16,253 ವೈದ್ಯೇತರ ಸಿಬ್ಬಂದಿಗಳ ಕೊರತೆ ಇರುತ್ತದೆ.

ಆ) ಕರ್ನಾಟಕ ಲೋಕಸೇವಾ ಆಯೋಗದ ಮೂಲಕ 2008–09ನೇ ಸಾಲಿನಲ್ಲಿ 815 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ನೇಮಕಗೊಂಡಿದ್ದು ಇವರಲ್ಲಿ 685 ಮಂದಿ ವೈದ್ಯರು ಕಾರ್ಯವರದಿ ಮಾಡಿಕೊಂಡಿದ್ದಾರೆ. ಹಾಗೂ 130 ಮಂದಿ ವರದಿ ಮಾಡಿಕೊಂಡಿಲ್ಲ. ಇದಲ್ಲದೆ 182 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇವೆ. ಮುಂದುವರೆದು, ಇಲಾಖೆಯಲ್ಲಿ 3101 ಹಿರಿಯ ತಜ್ಞರು/ತಜ್ಞರ ಹುದ್ದೆಗಳು ಮಂಜೂರಾಗಿದ್ದು 2124 ತಜ್ಞರು ಕಾರ್ಯನಿರ್ವಹಿಸುತ್ತಿದ್ದಾರೆ. ಹಾಗೂ 977 ತಜ್ಞ ಹುದ್ದೆಗಳು ಖಾಲಿ ಇವೆ. ಖಾಲಿ ಇರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ನೇಮಕ ಮಾಡಿಕೊಳ್ಳುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ತಜ್ಞರ ಸೇವೆಯನ್ನು ಸಮಾಲೋಚನೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ. ಇದಕ್ಕಾಗಿ ಎನ್.ಆರ್.ಹೆಚ್.ಎಂ. ಯೋಜನೆಯಡಿಯಲ್ಲಿ ರೂ. 25,000 ದಿಂದ ರೂ.50,000ದ ವರೆಗೆ ಗರಿಷ್ಟ ಮಾಸಿಕ ಗೌರವಧನ ನೀಡಲು ಅವಕಾಶ ಕಲ್ಪಿಸಲಾಗಿದೆ.

ಮುಂದುವರೆದು, ಇಲಾಖೆಯಲ್ಲಿ ಒಟ್ಟು 5245 ವೈದ್ಯೇತರ ಹುದ್ದೆಗಳನ್ನು ವಿಶೇಷ ನೇಮಕಾತಿ ಮೂಲಕ ಭರ್ತಿ ಮಾಡುವ ಪ್ರಕ್ರಿಯೆ ಜಾರಿಯಲ್ಲಿದೆ.

ಇ) ಸದರಿ ವಿಧಾನ ಸಭಾ ಕ್ಷೇತ್ರದಲ್ಲಿ ಈ ಕೆಳಕಂಡ ಆರೋಗ್ಯ ಕೇಂದ್ರಗಳಲ್ಲಿ ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇದೆ.

1) ಪ್ರಾ.ಆ.ಕೇಂದ್ರ ಆಗುಂಬೆ : 01
2) ಪ್ರಾ.ಆ.ಕೇಂದ್ರ ಮೇಗರವಳ್ಳಿ : 01
3) ಸಂಯುಕ್ತ ಆಸ್ಪತ್ರೆ ಕನ್ನಂಗಿ : 01

85 ಅರೆ ವೈದ್ಯಕೀಯ ಸಿಬ್ಬಂದಿಗಳು ಕೊರತೆ ಇರುತ್ತದೆ.

ಈ) ಬಂದಿದೆ.

ಉ) 2009–10ನೇ ಸಾಲಿನಲ್ಲಿ 3ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡಗಳನ್ನು ಅಂದರೆ, (1) ಗುತ್ತಿಎಡೆಹಳ್ಳಿ (2) ಅಗರ ಮತ್ತು (3) ಕಟಗೂರು ಗಳಲ್ಲಿ ಕೈಗೆತ್ತಿಕೊಳ್ಳಲಾಗಿದೆ ಹಾಗೂ ಕಾಮಗಾರಿ ಕೆಲಸಗಳು ಪ್ರಗತಿಯಲ್ಲಿರುತ್ತದೆ.

ಊ) ಬಂದಿದೆ.

ಋ) 2008–09ನೇ ಸಾಲಿನಲ್ಲಿ ತೀರ್ಥಹಳ್ಳಿ ವಿಧಾನ ಸಭಾ ಕ್ಷೇತ್ರದಲ್ಲಿ 4 ಪ್ರಾಥಮಿಕ ಆರೋಗ್ಯ ಕೇಂದ್ರಗಳಾದ ದೇವಂಗಿ, ಕೋಣಂದೂರು, ಯಡೂರು ಮತ್ತು ಮುತ್ತೂರು ಕಟ್ಟಡಗಳ ದುರಸ್ತಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಹಾಗೂ 2009–10ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಕ್ರಿಯಾ ಯೋಜನೆ ಅಡಿಯಲ್ಲಿ ಉಪಕೇಂದ್ರಗಳಾದ ಹಾದಿಗಲ್ಲು, ಕೋಣಂದೂರು, ಕಟಗಾರು, ದೇವಂಗಿ, ಕನ್ನಂಗಿ, ರಂಜದ ಕಟ್ಟೆ, ಬಸವಾನಿ, ಬೆಸುಗೆ, ಚಿಕ್ಕಜೇನಿ ಮತ್ತು ಕೋಡೂರು ಕಟ್ಟಡಗಳ ದುರಸ್ತಿ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಅರಗ ಇಲ್ಲಿನ ವೈದ್ಯರ ವಸತಿ ಗೃಹದ ದುರಸ್ತಿ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ.

ಶ್ರೀ ಕಿಮ್ಮನೆ ರತ್ನಾಕರ್: ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಆಸ್ಪತ್ರೆಯ ಕಟ್ಟಡಗಳು ಮತ್ತು ವೈದ್ಯರ ಕೊರತೆಯ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ನಾನು ಕೇಳಿರತಕ್ಕಂಥ 3 ಉಪಪ್ರಶ್ನೆಗಳಿಗೆ ಪೂರಕವಾದ ಉತ್ತರವನ್ನು ಕೊಟ್ಟಿಲ್ಲ. ಯಾವ ಕಟ್ಟಡಗಳು ಹಾಳಾಗಿವೆ ಅವುಗಳನ್ನು ಮುಂದಿನ ಹಂತದಲ್ಲಿ ತೆಗೆದುಕೊಳ್ಳುತ್ತೇವೆ ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ವಾಸ್ತವದಲ್ಲಿ ಸುಮಾರು 15 ವರ್ಷಗಳಿಂದ ಇದೇ ಉತ್ತರ ಬರುತ್ತಿದೆ. ಯಡೂರಿನಲ್ಲಿ 15 ವರ್ಷಗಳ ಹಿಂದೆಯೇ ಒಂದು ಆಸ್ಪತ್ರೆ ಕಟ್ಟಡವನ್ನು ಕಟ್ಟಲು ಪ್ರಾರಂಭಿಸಿದ್ದು ಅದು RCC ಲೆವೆಲ್‌ಗೆ ಬಂದು ನಿಂತಿದೆ. ಅದರ ಒಳಗಡೆ ಗಿಡಗಳೆಲ್ಲಾ ಬೆಳೆದಿವೆ, ಅದರೊಳಗೆ ಊರಿನವರು ಇಸ್ಪಿಟು ಆಡುತ್ತಿದ್ದಾರೆ. ಇಲ್ಲಿಯವರೆಗೆ ಅದನ್ನು ರಿಪೇರಿ ಮಾಡಿ ಪೂರ್ಣ ಮಾಡುವುದಕ್ಕೆ ಆಗಿಲ್ಲ. ಆದ್ದರಿಂದ, ಪ್ರಗತಿ ಎಂದರೆ ಯಾವ ರೀತಿಯ ಪ್ರಗತಿ ಎಂದು ನನಗೆ ಅರ್ಥವಾಗಲಿಲ್ಲ. ಒಂದು

ನಿರ್ದಿಷ್ಟವಾದ ಉತ್ತರಬೇಕು ಎಂದು ಮಾನ್ಯ ಸಚಿವರದಲ್ಲಿ ನನ್ನ ವಿನಂತಿ. ನಮ್ಮ ವಿಧಾನಸಭಾ ಕ್ಷೇತ್ರದಲ್ಲಿನ ಆಸ್ಪತ್ರೆಗಳಲ್ಲಿ ವೈದ್ಯರ ಹುದ್ದೆಗಳು ಖಾಲಿ ಇವೆ. ಅವುಗಳನ್ನು ಭರ್ತಿ ಮಾಡಬೇಕು ಎಂದು ಕೇಳಿದ್ದೇನೆ. ಮಾನ್ಯ ಸಚಿವರಲ್ಲಿ ನಾನು ಪ್ರಾರ್ಥನೆ ಮಾಡಿ ಕೊಳ್ಳತಕ್ಕಂಥಾದ್ದು ಏನೆಂದರೆ, ನಮ್ಮ ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರ ನಕ್ಸಲ್ ಪೀಡಿತ ಪ್ರದೇಶವಾಗಿದೆ. ಇದರ ಜೊತೆಗೆ ಅಲ್ಲಿ ಸುಮಾರು 300 ಇಂಚು ಮಳೆಯಾಗತಕ್ಕಂಥ ಪ್ರದೇಶವಾಗಿದೆ. ಆದರೆ ಈಗಾಗಲೇ ಅಲ್ಲಿ ದಾಖಲೆ ಮಳೆಯಾಗಿದೆ. ಹೆಚ್ಚು ಮಳೆ ಬೀಳತಕ್ಕಂಥ ಆಗುಂಬೆಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಡಾಕ್ಟರ್‌ಗಳೇ ಇರುವುದಿಲ್ಲ. ಹಾಗಾಗಿ, ಅಲ್ಲಿನ ಜನ ನೀವು ಡಾಕ್ಟರ್‌ಗಳನ್ನು ಹಾಕಿಸಿಕೊಡುವುದಿಲ್ಲವೆಂದು ನನ್ನ ವಿರುದ್ಧ strike ಮಾಡುತ್ತಾರೆ. ಮೇಗರವಳ್ಳಿಯಲ್ಲೂ ಡಾಕ್ಟರ್ ಇಲ್ಲ. ಅಲ್ಲೂ ಕೂಡ ಜನರು, ಶಾಸಕರು ಸರಿಯಾಗಿ ಕೆಲಸ ಮಾಡುವುದಿಲ್ಲವೆಂದು ಹೇಳಿ ನಮ್ಮ ವಿರುದ್ಧ strike ಮಾಡುತ್ತಾರೆ. ಹೀಗಾದರೆ ನಾವು ಏನು ಮಾಡಬೇಕು. ಈ ಕ್ಷೇತ್ರದಲ್ಲಿನ 4–5 ಆಸ್ಪತ್ರೆಗಳಿಗೆ ಕಟ್ಟಡಗಳಿವೆ, ಸಿಬ್ಬಂದಿಗಳಿಲ್ಲ, ಡಾಕ್ಟರ್ ಇಲ್ಲ. ಡಾಕ್ಟರ್ ಮತ್ತು ಸಿಬ್ಬಂದಿಗಳಿಲ್ಲದೇ ಇದ್ದರೆ ಕಟ್ಟಡಗಳ ಅವಶ್ಯಕತೆ ಇರುವುದಿಲ್ಲ. ಇತ್ತೀಚೆಗೆ ಡಾಕ್ಟರ್‌ಗಳಿಲ್ಲದೇ ಇಬ್ಬರು ಸತ್ತು ಹೋದರು. 3ನೇ ವರ್ಷದ ಪದವಿಯಲ್ಲಿ ಓದುತ್ತಿದ್ದಂಥ ಹೆಣ್ಣು ಮಗಳೊಬ್ಬಳನ್ನು ಎರಡು ಆಸ್ಪತ್ರೆಗಳಿಗೆ shift ಮಾಡಿದರೂ ಕೂಡ ಡಾಕ್ಟರ್‌ಗಳಿರಲಿಲ್ಲ. She shifted to the J.C. Hospital, Theerthahalli. 25 ಕಿ.ಮೀ. ದೂರವಿರುವ ಈ ಆಸ್ಪತ್ರೆಗೆ ಬರುವಷ್ಟರಲ್ಲಿ ಅವಳು ಸತ್ತು ಹೋದಳು. ಅದೇ ರೀತಿ, ಕಟ್ಟಹಾಕಲಿನಲ್ಲಿಯೂ ಡಾಕ್ಟರ್ ಇಲ್ಲ. ದೇವಂಗಿಯಲ್ಲೂ ಡಾಕ್ಟರ್ ಇಲ್ಲ. ಮತ್ತೊಬ್ಬ ಹೆಣ್ಣು ಮಗಳು ಅಲ್ಲಿಂದ ತೀರ್ಥಹಳ್ಳಿಗೆ ಬರುವಷ್ಟರಲ್ಲಿ ಸತ್ತು ಹೋದಳು. ಅದಕ್ಕೆ ಪರಿಹಾರವೂ ಇಲ್ಲ. ಔಷಧೋಪಚಾರಗಳೂ ಇಲ್ಲ. ನಾಯಿ ಕಚ್ಚಿದ್ದಕ್ಕೂ ಇಲ್ಲ, ಹಾವು ಕಚ್ಚಿದ್ದಕ್ಕೂ ಇಲ್ಲ. ಯಾವ Primary Health Centreನಲ್ಲಿ ಕೇಳಿದರೂ ಕೂಡ ನಮ್ಮ ಹತ್ತಿರ ಔಷಧಿ ಇಲ್ಲ ಎಂದು ಹೇಳುತ್ತಾರೆ. ಹೀಗಾದರೆ ಜನರಿಗೆ ನಾವು ಏನೊಂದು ಉತ್ತರ ಹೇಳುವುದು. ಈ ರೀತಿಯಾಗಿದ್ದರಿಂದಾಗಿ ಬಹಳ ಸಮಸ್ಯೆಯಾಗಿದೆ. ಅದೇ ರೀತಿ, ಕಟ್ಟಡಗಳನ್ನೂ ಸಹ ಕೂಡಲೇ ರಿಪೇರಿಯನ್ನೂ ಮಾಡುವುದಿಲ್ಲ. ಇವುಗಳೆಲ್ಲಕ್ಕೂ ಮಾನ್ಯ ಸಚಿವರು ಸ್ಪಷ್ಟೀಕರಣ ಕೊಡಬೇಕು ಮತ್ತು ಯಾವಾಗ ಡಾಕ್ಟರ್ ಬರುತ್ತಾರೆ ಎನ್ನುವುದನ್ನು ಹೇಳಬೇಕು. ಡಾಕ್ಟರ್‌ಗಳ ಕೊರತೆಯ ಬಗ್ಗೆ

ನಾನು ಪ್ರಥಮವಾಗಿಯೇ ಕೇಳಿದ್ದೇನೆ. ಅದಕ್ಕೆ ಉತ್ತರವಾಗಿ, ರಾಜ್ಯದಲ್ಲಿ ಸುಮಾರು 1200 ವೈದ್ಯರ ಕೊರತೆ ಇದೆ, ಅದರಲ್ಲಿ 800 ಜನರನ್ನು ನೇಮಕಾತಿ ಮಾಡಿದ್ದೇವೆ, ಅದರಲ್ಲಿ 600 ಜನ ಮಾತ್ರ report ಮಾಡಿಕೊಂಡಿದ್ದಾರೆ ಎಂದು ಹೇಳಿದ್ದಾರೆ. ನಮಗೆ ಸ್ಪಷ್ಟ ಉತ್ತರ ಬೇಕು, ಕಟ್ಟಡ ಯಾವಾಗ ರಿಪೇರಿಯಾಗುತ್ತದೆ, ಡಾಕ್ಟರ್‌ಗಳು ಯಾವಾಗ ಬರುತ್ತಾರೆ ಎಂದು ಹೇಳಬೇಕು. ಇವತ್ತು ನಾನು ಮನೆಗೆ ಹೋದರೆ, ನಾಳೆ ಮತ್ತೆ ನನ್ನೆದುರಿಗೆ strike ಮಾಡುತ್ತಾರೆ, ನಾನು ಅವರಿಗೆ ಏನೆಂದು ಉತ್ತರ ಕೊಡಬೇಕು. ನಾನು ಅವರಿಗೆ ಉತ್ತರ ಕೊಡಬೇಕಲ್ಲವೇ? ಆದ್ದರಿಂದ ನನಗೆ ಸ್ಪಷ್ಟವಾದ ಉತ್ತರಬೇಕು. ಮೇಗರವಳ್ಳಿ ನಕ್ಸಲ್ ಪೀಡಿತ ಪ್ರದೇಶ. ನಮಗೆ ಕ್ಷೇತ್ರದಲ್ಲಿ ಎಷ್ಟು ಸಮಸ್ಯೆ ಇದೆ ಎಂದರೆ, ಆಗುಂಬೆ ಹತ್ತಿರದಲ್ಲಿ ಇತ್ತೀಚೆಗೆ ಎರಡು ಮನೆಗಳನ್ನು ಲೂಟಿ ಮಾಡಿದರು, ಇದುವರೆಗೂ ಪರಿಹಾರ ಕೊಡಲಿಲ್ಲ. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಡಾಕ್ಟರ್‌ಗಳಿಲ್ಲ. ಹೀಗಾದರೆ ನಾವು ಅಲ್ಲಿಯ ಜನರಿಗೆ ಏನು ಉತ್ತರ ಕೊಡಬೇಕು? ಆದ್ದರಿಂದ ಮಾನ್ಯ ಸಚಿವರು ಒಂದು ಸ್ಪಷ್ಟನೆ ನೀಡಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಬಿ. ಶ್ರೀರಾಮುಲು: ಶಾಸಕರಾದ ಕಿಮ್ಮನೆ ರತ್ನಾಕರ್‌ರವರು, ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿನ ಆಸ್ಪತ್ರೆಗಳಲ್ಲಿ ಡಾಕ್ಟರ್‌ಗಳ ಕೊರತೆಯಿದೆ, ಆಸ್ಪತ್ರೆಗಳ ಕಟ್ಟಡಗಳು ಬಹಳಷ್ಟು ವರ್ಷಗಳಿಂದ ನಡೆಯುತ್ತಿವೆ, ಪೂರ್ಣವಾಗುತ್ತಿಲ್ಲ ಎಂದು ಹೇಳಿದ್ದಾರೆ. ರಾಜ್ಯದಲ್ಲಿ ಒಟ್ಟು 1,288 ಡಾಕ್ಟರ್‌ಗಳ ಕೊರತೆ ಇದೆ. ಅದೇ ರೀತಿ 16,253 ಬೇರೆಬೇರೆ ಹುದ್ದೆಗಳು ಖಾಲಿ ಇವೆ. ತೀರ್ಥಹಳ್ಳಿಯಲ್ಲಿರುವ ಗುತ್ತಿ ಎಡೆಹಳ್ಳಿ, ಅಗರ ಮತ್ತು ಕಟಗೂರುಗಳಲ್ಲಿ 56 ಲಕ್ಷ ರೂ.ಗಳ ವೆಚ್ಚದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಟ್ಟಡಗಳ ಕೆಲಸಗಳು ನಡೆಯುತ್ತಿವೆ. ಅದೇ ರೀತಿ, ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಯಡೂರು, ಮುತ್ತೂರು ಮುಂತಾದ ಕಡೆಗಳಲ್ಲಿ ಕೆಲಸ ನಡೆಯುತ್ತಿದೆ. ಶಾಸಕರು ವೈದ್ಯರ ಕೊರತೆಯ ಬಗ್ಗೆ ಹೇಳಿದ್ದಾರೆ. ಇವತ್ತು ರಾಜ್ಯದಲ್ಲಿ ಬಹಳಷ್ಟು ಕಡೆ ವೈದ್ಯರ ಕೊರತೆ ಕಂಡುಬರುತ್ತಿದೆ. ಆದಷ್ಟು ಬೇಗನೆ, ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಬೇಕಾದಂಥ ಡಾಕ್ಟರ್‌ಗಳನ್ನು, ಕಟ್ಟಡಗಳನ್ನು ಮಾಡಿಸಿ ಕೊಡುತ್ತೇನೆಂದು ಹೇಳುತ್ತೇನೆ. ಈ ಸದನ ಮುಗಿದ ನಂತರ, ಇದನ್ನು ಯಾವ ರೀತಿ ನಾವು ಪರಿಹಾರವನ್ನು ಮಾಡಬಹುದು ಎನ್ನುವ ಬಗ್ಗೆ ನಾವು ನೀವು ಕುಳಿತು ಮಾತನಾಡಿ ಪರಿಹಾರವನ್ನು ಮಾಡೋಣ ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳಲು ನಾನು ಬಯಸುತ್ತೇನೆ.